ಕರ್ನಾಟಕ ರಾಜ್ಯ ಮಹಿಳಾ ಆಯೋಗ
ನಂ.107, ಕಾವೇರಿ ಭವನ, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು-09,
ಟೆಲಿಫ್ಯಾಕ್ಸ್: 080-22216485 ಈ-ಮೇಲ್:kscwbang123@gmail.com

ಸಂ:ಕರಾಮಆ/ದೂ.ಅ./ಬೆಂ-414/2023-24 ದಿನಾಂಕ:15-03-2024

ಗೆ:
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ಮೆಟ್ರೋ ರೈಲ್ ಕಾರ್ಪೋರೇಷನ್ ಲಿಮಿಟೆಡ್,
ಪ್ರಧಾನ ಕಛೇರಿ,
3ನೇ ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್,
ಕೆಂಗಲ್ ಹನುಮಂತಯ್ಯ ರೋಡ್,
ಶಾಂತಿನಗರ, ಬೆಂಗಳೂರು-560027.

ಮಾನ್ಯರೇ,

**ವಿಷಯ:** ಶ್ರೀಮತಿ ಹೇಮಲತಾ ಹೆಚ್ ಮತ್ತು ಶ್ರೀಮತಿ ಶ್ರೀದೇವಿ, ಇವರ ಮನವಿ ಕುರಿತು.
**ಉಲ್ಲೇಖ:** ಅರ್ಜಿದಾರರ ಅರ್ಜಿಯ ದಿನಾಂಕ:14-03-2024.

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಶ್ರೀಮತಿ ಹೇಮಲತಾ ಹೆಚ್ ಕೋಂ ಹೇಮಗಿರೀಶ್ ಮತ್ತು ಶ್ರೀಮತಿ ಶ್ರೀದೇವಿ ಕೋಂ ವಿಶ್ವನಾಥ್, #06, ಗಾಯಿತ್ರಿ ಬಿಲ್ಡಿಂಗ್, 4ನೇ ಕ್ರಾಸ್, ಎಸ್ ರಮೇಶ್ ರಸ್ತೆ, ಓ.ಎಂ.ಹೆಚ್ ಕಾಲೋನಿ, ಟಿ ದಾಸರಹಳ್ಳಿ, ಬೆಂಗಳೂರು-560057, ಇವರು ಆಯೋಗದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರಾದ ಶ್ರೀಮತಿ ಹೇಮಲತಾ ಹಾಗೂ ಶ್ರೀಮತಿ ಶ್ರೀದೇವಿರವರು ನಮ್ಮ ಮೆಟ್ರೋ ಬೆಂಗಳೂರು ಮೆಟ್ರೋ(ಬಿ.ಎಂ.ಆರ್.ಸಿ.ಎಲ್), ಇಲ್ಲಿ ಆಧಾರಿತ ಟೆಂಡರುದಾರರ ಕಾರ್ಮಿಕರಾಗಿ(ಭದ್ರತಾ ಸಿಬ್ಬಂದಿ) ಕರ್ತವ್ಯ ನಿರ್ವಹಿಸುತ್ತಿದ್ದು, ಅಲ್ಲಿನ ಎ.ಎಸ್.ಓ ಅಧಿಕಾರಿಯಾದ ಶ್ರೀ ಗಜೇಂದ್ರನ್ ಎಂಬುವವರು ಅರ್ಜಿದಾರರಿಗೆ ಹಾಗೂ ಹಲವಾರು ಸಿಬ್ಬಂದಿಗಳಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಲೈಂಗಿಕ ಹಾಗೂ ಮಾನಸಿಕ ಕಿರುಕುಳ ನೀಡಿ, ಬೆದರಿಕೆ ಹಾಕಿರುವುದಲ್ಲದೇ, ಸೆಕ್ಯೂರಿಟಿ ಏಜೆನ್ಸಿಯವರು ಕೆಲಸದಿಂದ ತೆಗೆದು ಹಾಕಿರುವುದಾಗಿ ತಿಳಿಸುತ್ತಾ, ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು, ಅರ್ಜಿದಾರರಿಗೆ ನ್ಯಾಯ ಹಾಗೂ ರಕ್ಷಣೆ ಒದಗಿಸುವಂತೆ ಅರ್ಜಿಯಲ್ಲಿ ಮನವಿ ಮಾಡಿರುತ್ತಾರೆ. (ಹೆಚ್ಚಿನ ಮಾಹಿತಿಗಾಗಿ ಅರ್ಜಿದಾರರ ಅರ್ಜಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿದೆ)

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು **THE SEXUAL HARASSMENT OF WOMEN AT WORK PLACE (PREVENTION, PROHIBITION & REDRESSAL)ACT 2013**ರ ಕಲಂ 4ರಲ್ಲಿ ತಿಳಿಸಿರುವಂತೆ ಆಂತರಿಕ ದೂರು ಸಮಿತಿಯಲ್ಲಿ ವಿಚಾರಣೆಗೆ ಒಳಪಡಿಸಿ, ಅರ್ಜಿದಾರರ ಅರ್ಜಿಗೆ ಆಂತರಿಕ ದೂರು ಸಮಿತಿಯು ಕೈಗೊಂಡ ಕ್ರಮದ ವರದಿಯನ್ನು ಆಯೋಗಕ್ಕೆ ಕಳುಹಿಸಿ ಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿ,
ಕ.ರಾ.ಮ.ಆ. ಬೆಂಗಳೂರು.

**ಪ್ರತಿಯನ್ನು:**
ಶ್ರೀಮತಿ ಹೇಮಲತಾ ಹೆಚ್ ಕೋಂ ಹೇಮಗಿರೀಶ್ ಮತ್ತು ಶ್ರೀಮತಿ ಶ್ರೀದೇವಿ ಕೋಂ ವಿಶ್ವನಾಥ್, #06, ಗಾಯಿತ್ರಿ ಬಿಲ್ಡಿಂಗ್, 4ನೇ ಕ್ರಾಸ್, ಎಸ್ ರಮೇಶ್ ರಸ್ತೆ, ಓ.ಎಂ.ಹೆಚ್ ಕಾಲೋನಿ, ಟಿ ದಾಸರಹಳ್ಳಿ, ಬೆಂಗಳೂರು-560057.

o/c

ಕರ್ನಾಟಕ ರಾಜ್ಯ ಮಹಿಳಾ ಆಯೋಗ
ನಂ.107, ಕಾವೇರಿ ಭವನ, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು-09,
ಟೆಲಿಫ್ಯಾಕ್ಸ್: 080-22216485 ಈ-ಮೇಲ್: kscwbang123@gmail.com

ಸಂ:ಕರಾಮಆ/ದೂ.ಅ/ಬೆಂ-414 /2023-24 ದಿನಾಂಕ:15-03-2024

ಇವರಿಗೆ:
ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್,
ಪ್ರಧಾನ ಕಛೇರಿ,
3ನೇ ಬಿ.ಎಂ.ಟಿ.ಸಿ ಕಾಂಪ್ಲೆಕ್ಸ್,
ಕೆಂಗಲ್ ಹನುಮಂತಯ್ಯ ರೋಡ್,
ಶಾಂತಿನಗರ, ಬೆಂಗಳೂರು-560027.

ಮಾನ್ಯರೇ,

ವಿಷಯ: ತಮ್ಮ ಇಲಾಖೆಯಲ್ಲಿ ಹಾಗೂ ಅಧೀನ ಕಛೇರಿಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಿರುವ ಬಗ್ಗೆ.

ಉಲ್ಲೇಖ: 1. Sexual Harassment of Women at Workplace (Prevention, Prohibition, Redressal) Act, 2013.
2. ಸರ್ಕಾರದ ಆದೇಶ ಸಂಖ್ಯೆ:ಮಮಇ/28/ರಾಮಆ/2015 ಬೆಂಗಳೂರು ದಿನಾಂಕ:18/11/2015.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, Sexual Harassment of Women at Workplace (Prevention, Prohibition, Redressal) Act, 2013ಕ್ಕೆ ಸಂಬಂಧಿಸಿದಂತೆ 10, 10ಕ್ಕಿಂತ ಹೆಚ್ಚು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ/ಖಾಸಗಿ ಕಛೇರಿಗಳು, ಕಾರ್ಖಾನೆಗಳು/ಗಾರ್ಮೆಂಟ್ಸ್ ಫ್ಯಾಕ್ಟರಿಗಳು, ವಿಶ್ವವಿದ್ಯಾಲಯಗಳು, ಸಂಘ-ಸಂಸ್ಥೆಗಳು ಇತ್ಯಾದಿಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ತಮ್ಮ ಇಲಾಖೆಯಾದ ಬೆಂಗಳೂರು ಮೆಟ್ರೋ ರೈಲ್ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಅದರ ಅಧೀನದಲ್ಲಿ ಬರುವ ಇತರೆ ಕಛೇರಿಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಲಾಗಿದೆಯೇ? ರಚಿಸಿದ್ದಲ್ಲಿ, ರಚನೆ ಮಾಡಲಾದ ಸಂಪೂರ್ಣ ವಿವರಗಳೊಂದಿಗೆ (ಆಂತರಿಕ ದೂರು ಸಮಿತಿ ರಚನೆಯಾದ ದಿನಾಂಕ, ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರ ಹೆಸರು) ಆಯೋಗದ ಕಛೇರಿಗೆ ಮಾಹಿತಿಯನ್ನು ಕೂಡಲೆ ಇಮೇಲ್ ಅಥವಾ ಅಂಚೆ/ಕೊರಿಯರ್ ಅಥವಾ ಖುದ್ದಾಗಿ ಕಳುಹಿಸಿ ಕೊಡಲು ಕೋರಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿ,
ಕ.ರಾ.ಮ.ಆ. ಬೆಂಗಳೂರು

o/c